## <u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.</u>

**OS No**.429/2022

**PW**:1

**ದಿನಾಂಕ 10.06.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಪಾಟೀ ಸವಾಲುಃ1 ನೇ ಪ್ರತಿವಾದಿ ಪರ ಶ್ರೀ.ಎಸ್.ಎಸ್.ಪಿ. ವಕೀಲರಿಂದ:</u>**

ಈಗ್ಗೆ 8 ವರ್ಷಗಳ ಹಿಂದೆ ನನ್ನ ಗಂಡ ಮರಣ ಹೊಂದಿರುತ್ತಾರೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ಗಂಡನು ಮರಣ ಹೊಂದಿದ ನಂತರ ನನ್ನ ಮಕ್ಕಳ ವಯಸ್ಸು 21 ವರ್ಷ ವಯಸ್ಸಿಗಿಂತ ಮೇಲಿತ್ತು. ನಮ್ಮ ಕುಟುಂಬವು ಕೂಲಿ ಆಧಾರದ ಮೇಲೆ ಜೀವನ ಸಾಗಿಸುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯು ತನ್ನ ಮನೆಯಲ್ಲಿ ಜಗಳ ಆಡಿಕೊಂಡು 7-8 ವರ್ಷಗಳ ಕಾಲ ಹೊರಗಡೆ ತೀರುಗಾಡಿಕೊಂಡು ಇದ್ದನು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಸರಾಯಿ ಕುಡಿಯುವ ಅಭ್ಯಾಸ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಬಾವಿ ತೆಗೆಸುತ್ತೇನೆ ಎಂದು ನನ್ನ ಬಳಿ ಹಣವನ್ನು ತೆಗೆದುಕೊಂಡು ಹೋಗಿರುತ್ತಾನೆ. 1 ನೇ ಪ್ರತಿವಾದಿಯು 4-5 ಸಲ ನನ್ನ ಕಡೆಯಿಂದ ಹಣವನ್ನು ತೆಗೆದುಕೊಂಡು ಹೋಗಿರುತ್ತಾನೆ. ನಾನು 1 ನೇ ಪ್ರತಿವಾದಿಗೆ 70 ರಿಂದ 90 ಸಾವಿರ ರೂಪಾಯಿಗಳನ್ನು 5 ಬಾರಿ ನೀಡಿರುತ್ತೇನೆ. 1 ನೇ ಪ್ರತಿವಾದಿಗೆ 6 ವರ್ಷದ ಹಿಂದೆ ಮೊದಲ ಬಾರಿಗೆ ಹಣವನ್ನು ನೀಡಿರುತ್ತೇನೆ. ಸದರಿ ಹಣವನ್ನು ಕೊಡದೇ ಇರುವ ಕಾರಣಕ್ಕಾಗಿ ಹೊಲವನ್ನು ಬರೆದುಕೊಟ್ಟಿರುತ್ತಾನೆ ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ. ನಮಗೂ ಮತ್ತು 1 ನೇ ಪ್ರತಿವಾದಿಗೂ ಪರಿಚಯ ಮತ್ತು ವಿಶ್ವಾಸ ಇರುತ್ತದೆ ಎಂದರೆ ಸರಿ. ನನಗೂ ಮತ್ತು 1 ನೇ ಪ್ರತಿವಾದಿಗೂ ವಿಶ್ವಾಸ ಚೆನ್ನಾಗಿ ಇರುವ ಕಾರಣ ಆತನು ತನ್ನ ಮನೆಯಲ್ಲಿ ಇರದೇ ನಮ್ಮ ಮನೆಯಲ್ಲಿ ಬಂದು ಇರುತ್ತಿದ್ದನು ಎಂದರೆ ಸರಿಯಲ್ಲ. 2017 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯೂ 50,000/- ರೂ. ಹಣ ಬೆಕಾಗಿದೆ ಎಂದು ನನ್ನ ಹತ್ತಿರ ಕೇಳಿದ್ದನು ಎಂದರೆ ಸರಿ. ಆಗ ನಾನು ಹಣವನ್ನು ಕೊಡುತ್ತೇನೆ ಹೊಲವನ್ನು ಬರೆದುಕೊಡು ಎಂದು 1 ನೇ ಪ್ರತಿವಾದಿಯನ್ನು ಕೇಳಿರುತ್ತೇನೆ ಎಂದರೆ ಸರಿ. ಆಗ ನಾನು, 1 ನೇ ಪ್ರತಿವಾದಿ, ಕಾಂತಪ್ಪ ಬಿರಾದಾರ ಮತ್ತು ಲಗಮಣ್ಣ ಬಳ್ಳೊಳ್ಳಿ ಉಪನೊಂದಣಾಧಿಕಾರಿ ಕಚೇರಿಗೆ ಬಂದಿರುತ್ತೇವೆ ಎಂದರೆ ಸರಿ. ನಾನು ಹಣದ ಭದ್ರತೆಗಾಗಿ 1 ಕಾಗದವನ್ನು ಉಪನೊಂದಣಾಧಿಕಾರಿ ಕಚೇರಿಯಲ್ಲಿ ಮಾಡಿರುತ್ತೇನೆ ಎಂದರೆ ಸರಿ. ನಾವು ತಯಾರು ಮಾಡಿದ ಕಾಗದಕ್ಕೆ 1 ನೇ



ಪ್ರತಿವಾದಿಯು ಸಹಿ ಮಾಡಿರುತ್ತಾನೆ ಎಂದರೆ ಸರಿ. ನಾನು ಕೊಡುವ ಹಣದ ಕೈಗಡ ಭದ್ರತೆಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯು ದಾಖಲೆಗೆ ಸಹಿ ಮಾಡಿರುತ್ತಾನೆ ಎಂದರೆ ಸರಿ. ಕಾಗದ ಆದ

ನಂತರ ಯಾವುದೇ ಹಣವನ್ನು 1 ನೇ ಪ್ರತಿವಾದಿಯು ಕೊಡಲಿಲ್ಲ ಎಂದರೆ ಸಾಕ್ಷಿಯು 4 ಲಕ್ಷ ಹಣವನ್ನು ಕೊಟ್ಟಿರುತ್ತೇನೆ ಇನ್ನೂ 50,000/- ಕೊಡಬೆಕಾಗಿತ್ತು ಎಂದು ನುಡಿಯುತ್ತಾರೆ. ನಾನು 1 ನೇ ಪ್ರತಿವಾದಿಗೆ ಆ ದಿನ ಮತ್ತು ನಂತರದ ದಿನ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಗೆ 4 ಲಕ್ಷ ರೂ.ಗಳನ್ನು ಮೊದಲು ಕೊಟ್ಟಿದ್ದೇನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಂತಪ್ಪ ಬಿರಾದಾರ ಮತ್ತು ಲಗಮಣ್ಣ ಬಳ್ಳೊಳ್ಳಿ ಇವರು 50,000/- ರೂ. ಹಣವನ್ನು ಕೊಡು ಎಂದು ಹೇಳಿದ್ದರು ನೀವು 1 ನೇ ಪ್ರತಿವಾದಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ನಾನು ಎಷ್ಟು ಸರಿ ಕರೆದರು ಸಹ 1 ನೇ ಪ್ರತಿವಾದಿಯೂ ಬಂದಿರುವುದಿಲ್ಲ ಆದ ಕಾರಣ ಕೊಟ್ಟಿರುವುದಿಲ್ಲವೆಂದು ನುಡಿಯುತ್ತಾರೆ. ನಿ.ಪಿ.1 ಆದ ಮರುದಿನ ಸದರಿ ಕಾಂತಪ್ಪ ಮತ್ತು ಲಗಮಣ್ಣ ಇವರು 1 ನೇ ಪ್ರತಿವಾದಿಗೆ 50,000/- ರೂ. ಹಣವನ್ನು ಕೊಡು ಎಂದು ಹೇಳಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 4 ದಿನ ಆದ ನಂತರ 1 ನೇ ಪ್ರತಿವಾದಿಯನ್ನು ಕರೆದರು ಆತನು ಖರೀದಿಗೆ ಬಂದಿರುವುದಿಲ್ಲವೆಂದು ನುಡಿಯುತ್ತಾರೆ. ಜಮೀನಿನ ಖರೀದಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯು ನನ್ನ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಆದ ಮಾರನೇ ದಿನ ಊರಿನಲ್ಲಿ ನ್ಯಾಯ ಪಂಚಾಯತಿ ಕುರಿಸಿದ್ದರು ಎಂದರೆ ಸರಿಯಲ್ಲ. ಸದರಿ ನ್ಯಾಯದಲ್ಲಿ 1 ನೇ ಪ್ರತಿವಾದಿಯು ಕುಡುಕ ಇರುವ ಕಾರಣ ಬೇರೆ ಯಾರಿಗಾದರು ಜಮೀನನ್ನು ಮಾರಾಟ ಮಾಡುತ್ತಾನೆ ಎನ್ನುವ ಕಾರಣಕ್ಕೆ 2 ನೇ ಪ್ರತಿವಾದಿಯ ಹೆಸರನ್ನು ದಾವಾ ಜಮೀನಿಗೆ ಜಂಟಿಯಾಗಿ ದಾಖಲು ಮಾಡುವಂತೆ ತೀರ್ಮಾನ ಮಾಡಿದ ಕಾರಣ ಆತನು ಒಂದು ವ್ಯವಸ್ಥಾಪನ ಪತ್ರವನ್ನು ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ನನ್ನ ಮೇಲೆ ವಿಶ್ವಾಸ ಇಟ್ಟಿರುವದನ್ನು ದುರುಪಯೋಗಪಡಿಸಿಕೊಂಡು ನಿ.ಪಿ.1 ನ್ನು ಖೊಟ್ಟಿಯಾಗಿ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಖರೀದಿ ಹಣವನ್ನು ಯಾರ ಮುಂದೆ ಕೊಟ್ಟಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಯಾರ ಮುಂದೆಯೂ ಕೊಟ್ಟಿಲ್ಲ ಆತನೇ ಹಣವನ್ನು ತೆಗೆದುಕೊಂಡು ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಕೂಲಿ ಕೆಲಸದ ಹಣವನ್ನು ಶೇಖರಿಸಿಟ್ಟಿದ್ದು ಆ ಹಣವನ್ನು 1 ನೇ ಪ್ರತಿವಾದಿಗೆ ನೀಡಿರುತ್ತೇನೆ. 2017 ನೇ ಇಸವಿಯಲ್ಲಿ 2 ಲಕ್ಷಕ್ಕೆ ಕಬ್ಬನ್ನು ಕಟಾವು ಮಾಡಲು ಕೆಲಸ ಒಪ್ಪಿಕೊಂಡಿದ್ದೇನು. ಸದರಿ 2 ಲಕ್ಷ ಹಣವನ್ನು ಶ್ರೀಶೈಲ ಗಿರಿಗಾಂವ ಇವರು ನನಗೆ ಕೊಟ್ಟಿದ್ದರು. ಸದರಿ ಶ್ರೀಶೈಲ ಇವರ



ಸಾಕ್ಷಿಯನ್ನು ಮಾಡಿಸುವುದಿಲ್ಲ. 2017 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯು ಹೊಲವನ್ನು 4,50,000/- ರೂ.ಗಳಿಗೆ ಮಾರಾಟ ಮಾಡಲು ತೆಗೆದಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ11.08.2017 ರಂದು ಆ ಪ್ರಕಾರ 1 ನೇ ಪ್ರತಿವಾದಿಯು ನನಗೆ ಖರೀದಿ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯನ್ನು ನಾನು ಮತ್ತು ಲಗಮಣ್ಣ ಭೇಟಿಯಾಗಿ ಉಳಿದ

50,000/- ರೂ.ಗಳನ್ನು ಕೊಡುತ್ತೇನೆ ಖರೀದಿ ಪತ್ರವನ್ನು ಬರೆದುಕೊಡು ಎಂದು 2 ಸಲ ಹೋಗಿರುತ್ತೇವೆ. 1 ನೇ ಪ್ರತಿವಾದಿಯು ನನಗೆ ಯಾವುದೇ ಖರೀದಿ ಪತ್ರವನ್ನು ಬರೆದು ಕೊಡದೇ ಇರುವ ಕಾರಣ ಖರೀದಿ ಪತ್ರವನ್ನು ಮಾಡಿಕೊಡುವ ಅವಶ್ಯಕತೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.